**1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು–ಮಡಿಕೇರಿ**

**ಎಸ್.ಸಿ ಸಂಖ್ಯೆಃ 15/2025**

ಫ್ರಾಸಾಃ 1

ಚಾಸಾಃ 1

| | | |
|---|---|---|
| ಸಾಕ್ಷಿದಾರರ ಹೆಸರು | : | ಆನಂದ |
| ತಂದೆಯ ಹೆಸರು | : | ಲೇಟ್ ದಂಡಯ್ಯ |
| ವಯಸ್ಸು | : | 42 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸ | : | ಚಿಕ್ಕಹೊಸೂರು ಗ್ರಾಮ, ಪಿರಿಯಾಪಟ್ಟಣ |

**ಸಾಕ್ಷಿಯನ್ನು ದಿನಾಂಕ 02–02–2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1. ಮೃತ ಕಾವೇರಿ ನನ್ನ ಅಕ್ಕ. ನ್ಯಾಯಾಲಯದ ಮುಂದಿರುವ ಆರೋಪಿ ಮೃತ ಕಾವೇರಿಯ ಮಗ. ನನಗೆ ಒಟ್ಟು ಮೂರು ಅಕ್ಕಂದಿರು. ಮೃತ ಕಾವೇರಿಯನ್ನು ಈ ಹಿಂದೆ ಸೋಮವಾರಪೇಟೆ ತಾಲ್ಲೂಕಿನ ಶಾಂತಳ್ಳಿ ವಾಸಿ ಸುಬ್ಬಯ್ಯ ರವರಿಗೆ ಮದುವೆ ಮಾಡಿ ಕೊಟ್ಟಿದೆವು. ಸುಬ್ಬಯ್ಯ ಸರ್ವೇ ಇಲಾಖೆಯಲ್ಲಿ ಕೆಲಸ ಮಾಡಿಕೊಂಡಿದ್ದು, ಈಗ ನಿವೃತ್ತಿಯಾಗಿ ಈಗಾಗಲೇ ಹತ್ತು ವರ್ಷದ ಹಿಂದೆ ಮೃತರಾಗಿರುತ್ತಾರೆ. ಕಾವೇರಿ ಮೃತಳಾಗುವುದಕ್ಕಿಂತ ಮುಂಚೆ ಶಾಂತಳ್ಳಿಯಲ್ಲಿ ವಾಸವಿದ್ದಳು. ಇವರಿಗೆ ಒಟ್ಟು ಇಬ್ಬರು ಮಕ್ಕಳು, ಅವರು ಆರೋಪಿ ಮತ್ತು ಮೃತ ಈಶ್ವರ. ಕಾವೇರಿ ಆರೋಪಿಯೊಂದಿಗೆ ವಾಸವಿದ್ದಳು, ಅವರಿಬ್ಬರ ಸಂಬಂಧ ಚೆನ್ನಾಗಿತ್ತು. ಇಬ್ಬರೂ ಸಹ ಕೂಲಿ ಕೆಲಸ ಮಾಡಿಕೊಂಡಿದ್ದರು. ಮೃತ ಕಾವೇರಿ ಅವರಿಗೆ ಮದ್ಯಪಾನ ಮಾಡುವ

ಅಭ್ಯಾಸವಿತ್ತು. ಮೃತ ಸುಬ್ಬಯ್ಯನ ಪಿಂಚಣಿ ಹಣ ಮೃತ ಕಾವೇರಿಗೆ ಬರುತ್ತಿತ್ತು. ಸದರಿ ಹಣ ಬರುತ್ತಿರುವ ವಿಚಾರ ನನಗೆ ಹೇಳಿರಲಿಲ್ಲ.

2. ಚಾಸಾ-2 ರಿಂದ 14 ನನ್ನ ಸಂಬಂಧಿಕರು. ದಿಃ 31-05-2024 ರಂದು ಕಾವೇರಿ ತನ್ನ ಮನೆಯಲ್ಲಿ ಶಾಂತಳ್ಳಿಯಲ್ಲಿ ಮೃತರಾಗಿರುತ್ತಾರೆ. ಸದರಿ ವಿಚಾರವನ್ನು ಶಾಂತಳ್ಳಿ ವಾಸಿ ಪ್ರತಾಪ್ ಎಂಬುವವರು ನನಗೆ ದಿಃ 01-06-2024 ರಂದು ಬೆಳಗಿನ ಜಾವ 5.00 ಗಂಟೆ ಸಮಯಕ್ಕೆ ವಿಷಯ ತಿಳಿಸಿದನು. ಆ ಸಮಯಕ್ಕೆ ಆರೋಪಿ ಕೂಡ ಘಟನಾ ಸ್ಥಳದಲ್ಲಿ ಇದ್ದನು, ಸದರಿ ವಿಷಯ ತಿಳಿದು ನಾನು ಹೋಗಿ ನೋಡಲಾಗಿ ಆಗ ಗ್ರಾಮಸ್ಥರು ಮತ್ತು ಸಂಬಂಧಿಕರು ನೆರೆದಿದ್ದರು. ಮೃತ ಕಾವೇರಿಯ ದೇಹವನ್ನು ನಾನು ನೋಡಲಾಗಿ ಮುಖ ಊದಿರುವುದನ್ನು ಬಿಟ್ಟರೆ ಇನ್ನಿತರೆ ಗಾಯಗಳು ಕಂಡು ಬಂದಿಲ್ಲ. ಸಾವಿಗೆ ನಿಖರ ಕಾರಣ ನನಗೆ ಗೊತ್ತಿಲ್ಲ. ತದನಂತರ ಸೋಮವಾರಪೇಟೆ ಪೊಲೀಸ್ ಠಾಣೆಗೆ ಪೊಲೀಸರು ನನ್ನನ್ನು ಕರೆಸಿಕೊಂಡು ನನ್ನಿಂದ ಸುಮಾರು 3 ದಾಖಲೆಗೆ ಸಹಿ ಪಡೆದುಕೊಂಡಿರುತ್ತಾರೆ. ಅವುಗಳು ಯಾವ ದಾಖಲಾತಿಗಳು ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಗಳ ಪೈಕಿ ಒಂದು ದಾಖಲೆಯಾದ ದೂರನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಅದರಲ್ಲಿ ತನ್ನ ಸಹಿಯನ್ನು ಗುರುತಿಸಿದ ಮೇರೆಗೆ ದೂರನ್ನು ನಿಪಿ-1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದೂರಿನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ದೂರು ಪಡೆದ ಪೊಲೀಸರು ಅದೇ ದಿನ ಶಾಂತಳ್ಳಿ ಕಾವೇರಿಯವರ ಮನೆಗೆ ಬಂದು ಮೃತ ಕಾವೇರಿ ದೇಹವನ್ನು ಶವ ಪರೀಕ್ಷೆಗಾಗಿ ತೆಗೆದುಕೊಂಡು ಹೋದರು. ಶವ ಪರೀಕ್ಷೆ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ಮೃತ ದೇಹದ ಮುಖವನ್ನು ಹೊರತಾಗಿ ಇತರೆ ಭಾಗವನ್ನು ನಾನು ನೋಡಿಲ್ಲ.

3. **ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸೀಲಾದ ಮೃತ ಕಾವೇರಿ ತೊಟ್ಟಿದ್ದಳು ಎನ್ನಲಾದ ವಸ್ತುಗಳನ್ನು ತೆರೆದ ನ್ಯಾಯಾಲಯದ ತೆರೆದು ಸಾಕ್ಷಿಗೆ ತೋರಿಸಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.** ಸಾಕ್ಷಿಗೆ ಈಗ ಒಂದು ಗಿಣಿ ಹಸಿರು ಬಣ್ಣದ ರಕ್ತದ ಕಲೆ ಇರುವ ಸೀರೆ ಮತ್ತು ಹಸಿರು ಹಳದಿ ಮಿಶ್ರಿತ ರಕ್ತದ ಕಲೆ ಇರುವ ರವಿಕೆ ಮತ್ತು ಕಾಫಿ ಮತ್ತು ಗಿಣಿ ಮಿಶ್ರಿತ ಕಲರ್ ನ ಒಳಲಂಗವನ್ನು ಸಾಕ್ಷಿ ನೋಡಿ ಗುರುತಿಸಿರುವುದಿಲ್ಲ.

4. ತದನಂತರ ಪೊಲೀಸರು ಆರೋಪಿಯನ್ನು ಯಾವ ಕಾರಣಕ್ಕಾಗಿ ದಸ್ತಗಿರಿ ಮಾಡಿದ್ದರು, ಆತನ ಮೇಲೆ ಏನು ಪ್ರಕರಣ ದಾಖಲು ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಪೊಲೀಸರು ಈ ವಿಚಾರವನ್ನು ನನ್ನನ್ನು ವಿಚಾರಿಸಿರುವುದಿಲ್ಲ. ಸಾಕ್ಷಿಗೆ ಈಗ ಆಸ್ಪತ್ರೆಯಲ್ಲಿ ಶವ ಪಂಚನಾಮೆ ಮಾಡಿದ ಸಮಯದಲ್ಲಿ ತೆಗೆದ 2 ಫೋಟೋಗಳನ್ನು ತೋರಿಸಿದ್ದು, ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದರಲ್ಲಿರುವ ಮೃತ ದೇಹ ಕಾವೇರಿಯದ್ದು, ಸದರಿ ಫೋಟೋದಲ್ಲಿ ನಾನು ಇದ್ದೇನೆ, ಸದರಿ 2 ಫೋಟೋಗಳನ್ನು ಒಟ್ಟಾಗಿ ನಿಪಿ–2 ಎಂದು ಗುರುತಿಸಲಾಯಿತು. ಮೃತ ಕಾವೇರಿ ಮರಣ ಹೊಂದಲು ಕಾರಣ ನನಗೆ ಗೊತ್ತಿಲ್ಲ, ಆದರೆ ಸದರಿರವರಿಗೆ ಮದ್ಯಪಾನ ಮಾಡುವ ಅಭ್ಯಾಸವಿದ್ದು, ಮದ್ಯಪಾನ ಮಾಡಿದ ಸಂದರ್ಭ ಮನೆಯ ಮೆಟ್ಟಿಲ್ಲು ಎತ್ತರದಲ್ಲಿ ಕಟ್ಟಿದ್ದು, ಎಡವಿ ಬಿದ್ದು ಆಕೆಗೆ ಏಟಾಗಿ ಮೃತ ಹೊಂದಿರುತ್ತಾಳೆ ಎಂದು ಸಾಕ್ಷಿ ನುಡಿಯುತ್ತಾರೆ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ಪೊಲೀಸರ ಮುಂದೆ ನೀಡಿದ ಹೇಳಿಕೆ ಮತ್ತು ಮುಖ್ಯ ವಿಚಾರಣೆಯನ್ನು ಪರಿಶೀಲಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಗಿದೆ).**

**ಪಾಟೀಸವಾಲು– ಸರ್ಕಾರಿ ಅಭಿಯೋಜಕರಿಂದಃ**

5. ಮೃತ ಕಾವೇರಿಗೆ ಆತನ ಗಂಡನಾದ ಸುಬ್ಬಯ್ಯ ಪಿಂಚಣಿ ಹಣ ಬರುತ್ತಿದ್ದು, ಸದರಿ ಎಲ್ಲಾ ಹಣವನ್ನು ಮದ್ಯಪಾನ ಮಾಡುವುದಕ್ಕಾಗಿಯೇ ಉಪಯೋಗಿಸುತ್ತಿದ್ದರು, ಈ ವಿಚಾರಕ್ಕಾಗಿ ಆರೋಪಿಗೂ ಮತ್ತು ಮೃತ ಕಾವೇರಿಗೂ ವಾಗ್ವದ ನಡೆಯುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರವನ್ನು ಕಾವೇರಿ ಮೃತಳಾಗುವುದಕ್ಕಿಂತ ಮುಂಚೆ ನನಗೆ ಹೇಳಿದ್ದಳು ಎಂದರೆ ಸರಿಯಲ್ಲ. ದಿಃ 31-05-2024 ರಂದು ಮೃತ ಕಾವೇರಿ ಮದ್ಯಪಾನ ಮಾಡಿ ಮನೆಯಲ್ಲೇ ರಾತ್ರಿ ಇದ್ದ ಸಂದರ್ಭ ಈ ವಿಚಾರಕ್ಕೆ ಆರೋಪಿ ಮೃತ ಕಾವೇರಿಯನ್ನು ಕುರಿತು ಬಂದ ಪಿಂಚಣಿ ಹಣವನೆಲ್ಲಾ ಮದ್ಯಪಾನ ಮಾಡುವುದಕ್ಕಾಗಿಯೇ ಖರ್ಚು ಮಾಡುತ್ತೀಯಾ ಎಂದು ಗಲಾಟೆ ಮಾಡಿ ಮನೆಯಲ್ಲಿಯೇ ಇದ್ದ ಸೌದೆ ಕೋಲಿನಿಂದ ಕಾವೇರಿಯ ದೇಹದ ಎಲ್ಲಾ ಭಾಗಗಳಿಗೂ ಹಲವಾರು ಬಾರಿ ಜೋರಾಗಿ ಹೊಡೆದು, ಗಾಯ ಪಡಿಸಿ ಸದರಿ ಗಾಯಗಳಿಂದ ಕಾವೇರಿ ಮೃತಳಾಗಿರುತ್ತಾಳೆ ಎಂದರೆ ಸರಿಯಲ್ಲ. ಈದಾದ ನಂತರ ನಾನು ಸುರೇಶನ ಬಳಿ ವಿಚಾರಿಸಿದಾಗ ಆತ ನನ್ನ ಬಳಿ ಕಾವೇರಿ ಮೆಟ್ಟಿಲಿನಿಂದ ಎಡವಿ ಬಿದ್ದು ಮೃತಳಾಗಿರುತ್ತಾಳೆ ಎಂದು ಸುಳ್ಳು ಮಾಹಿತಿ ನೀಡಿದ್ದ ಎಂದರೆ ಸರಿಯಲ್ಲ. ಇದೇ ಕಾರಣಕ್ಕಾಗಿಯೇ ಸಾವಿನ ವಿಚಾರವಾಗಿ ನನಗೆ ಅನುಮಾನ ಇರುತ್ತದೆ ಎಂದು ಸೋಮವಾರಪೇಟೆ ಪೊಲೀಸ್ ಠಾಣೆಗೆ ಹೋಗಿ ತನಿಖೆ ಮಾಡುವಂತೆ ನಿಪಿ-1 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

6. ಸೋಮವಾರಪೇಟೆಯ ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಮೃತ ಕಾವೇರಿಯ ದೇಹವನ್ನು ನೋಡಿದಾಗ ಸದರಿ ಕಾವೇರಿರವರ ದೇಹದ ಮೇಲೆ ದೊಣ್ಣೆಯಿಂದ ಹಲ್ಲೆ ಮಾಡಿದಾಗ ಆಗುವಂತಹ ಗಾಯಗಳು ಎಡಭಾಗದ ತಲೆ, ಎಡಕಾಲಿಗೆ ರಕ್ತಗಾಯವಾಗಿ, ಎಡ ಮೊಣಕೈ ಊದಿಕೊಂಡಂತೆ ಇದ್ದವು ಎಂದರೆ

ಸಾಕ್ಷಿಯು ನಾನು ನೋಡಿಲ್ಲ ಎನ್ನುತ್ತಾರೆ. ಶವ ಪಂಚನಾಮೆ ಜರುಗಿಸುವ ವೇಳೆ ಫೋಟೋದಲ್ಲಿ ನಾನು ಇದ್ದರೂ ಸಹ ಆರೋಪಿ ನನ್ನ ಸಂಬಂಧಿಕನಾದ ಕಾರಣ ಆತನಿಗೆ ಸಹಕರಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಯವರ ಮುಂದೆ ಈಗ ನನಗೆ ಓದಿ ಹೇಳಿದಂತೆ ಅಂದರೆ "ನನ್ನ ಭಾವ ಸುಬ್ಬಯ್ಯ --------------------ಎಂಬುದಾಗಿ ನೀಡಿರುವ ಹೇಳಿಕೆ" ಎಂದು ಹೇಳಿಕೆಯನ್ನು ನೀಡಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಸಾಕ್ಷಿಯ ಹೇಳಿಕೆಯ ನಿರ್ದಿಷ್ಟ ಭಾಗವನ್ನು ನಿಪಿ-3 ಎಂದು ಗುರುತಿಸಲಾಯಿತು. ಆರೋಪಿಯೇ ಕಾವೇರಿಯವರನ್ನು ದೊಣ್ಣೆಯಿಂದ ಹೊಡೆದು ಸಾಯಿಸಿರುವ ವಿಚಾರ ಗೊತ್ತಿದ್ದರೂ ಸಹ ಆತ ನನ್ನ ಸಂಬಂಧಿಕ ಆದ ಕಾರಣ ಆತನನ್ನು ಶಿಕ್ಷೆಯಿಂದ ತಪ್ಪಿಸಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು- ಆರೋಪಿ ಪರ ಶ್ರೀ. ಎಂ.ಬಿ.ಎಸ್ ವಕೀಲರಿಂದಃ**
ಇರುವುದಿಲ್ಲ.

**ಮರುವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ.